ಸ್ವಾಮಿ ವಿವೇಕಾನಂದರ ಸಾನ್ನಿಧ್ಯಲಾಭ ಪಡೆದ ಭಾಗ್ಯವಂತ ಭಾರತೀಯ ನಾರಿಯರು

# ಹೇರಂಬರಾಣಿ, ಸರಳಾದೇವಿ, ಪ್ರಭಾವತಿದೇವಿ

**ಡಾ. ಶೈಲಜಾ ಆಮೂರ**

ಸ್ವಾಮಿ ವಿವೇಕಾನಂದರು ಜೈಪುರಕ್ಕೆ ಒಟ್ಟು ಆರು ಬಾರಿ ಭೇಟಿ ನೀಡಿದ್ದರು. ಅವರು ೧೮೯೧ರ ಮಾರ್ಚ್ ತಿಂಗಳಲ್ಲಿ ಆಳ್ವಾರ್‌ದಿಂದ ಬಸವಾ ಮಾರ್ಗವಾಗಿ ರೈಲಿನಲ್ಲಿ ಜೈಪುರಕ್ಕೆ ಮೊದಲ ಬಾರಿ ಪ್ರಯಾಣಿಸಿದರು. ತಮ್ಮ ಮೊದಲ ಭೇಟಿಯಲ್ಲಿ ಅವರು ಹದಿನೈದು ದಿನಗಳ ಕಾಲ ಜೈಪುರದಲ್ಲಿ ವಾಸಿಸಿದರು. ಆರು ವರ್ಷಗಳ ಅವಧಿಯಲ್ಲಿ ಸ್ವಾಮೀಜಿ ಆರು ಬಾರಿ ಜೈಪುರಕ್ಕೆ ಆಗಮಿಸಿ, ಒಟ್ಟಾರೆ ಇಪ್ಪತ್ತಾರು ದಿನಗಳನ್ನು ಅಲ್ಲಿ ಕಳೆದಿದ್ದರು.

ಅವರು ತಮ್ಮ ಮೊದಲನೆಯ ಭೇಟಿಯ ಸಮಯದಲ್ಲಿ ನಾಲ್ಕು ದಿನಗಳ ಕಾಲ ಸಂಸಾರಚಂದ್ರ ಸೇನ್ ಎನ್ನುವವರ ಮನೆಯಲ್ಲಿ ಉಳಿದುಕೊಂಡಿದ್ದರು. ನಂತರ ಜೈಪುರದ ಕರ್ನಲ್ ಆಗಿ ಸೇವೆ ಸಲ್ಲಿಸುತ್ತಿದ್ದ ಹರಿಸಿಂಘಲ್‌ಜಿ ಅವರ ಮನೆಯಲ್ಲಿ ನಾಲ್ಕು ದಿನಗಳ ಕಾಲ ವಾಸವಾಗಿದ್ದರು. ಇನ್ನುಳಿದ ಏಳು ದಿನಗಳನ್ನು ಬೇರೆ ಬೇರೆ ಸ್ಥಾನಗಳಲ್ಲಿ ಕಳೆದಿದ್ದರು. ಕೆಲದಿನ ಜೈಪುರದಲ್ಲಿ ಕಾಲೇಜು ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದ ಕಾಂತಿಚಂದ್ರ ಮುಖರ್ಜಿ ಎನ್ನುವವರ ಮನೆಯಲ್ಲಿ ಕಳೆದರು.

ಖೇತ್ರಿಯ ರಾಜ ಅಜಿತ್‌ಸಿಂಗ್ ಕೂಡ ಕಾಂತಿಚಂದ್ರರ ಶಿಷ್ಯರಲ್ಲಿ ಒಬ್ಬನಾಗಿದ್ದ. ಸ್ವಾಮೀಜಿಯವರ ಜೈಪುರದ ಎಲ್ಲ ವಾಸ್ತವ್ಯಗಳಲ್ಲಿ ಅವರು ತಮ್ಮ ಮೊದಲನೆಯ ಭೇಟಿಯಲ್ಲಿ ವಾಸವಾಗಿದ್ದ ಸಂಸಾರಚಂದ್ರ ಸೇನನ ಮನೆಯಲ್ಲಿನ ವಾಸ್ತವ್ಯದ ಬಗ್ಗೆ ಮಾತ್ರ ಮಾಹಿತಿ ಸದ್ಯಕ್ಕೆ ಲಭ್ಯವಿದೆ. ಈ ಬಗ್ಗೆ ಸಂಸಾರಚಂದ್ರಸೇನರ ಮೊಮ್ಮಗಳಾದ ಜ್ಯೋತಿರ್ಮಯಿ ದೇವಿ ಬರೆದ 'ಜಯಪುರೇ ಸ್ವಾಮಿ ವಿವೇಕಾನಂದ' ಎಂಬ ಬಂಗಾಳೀ ಭಾಷೆಯ ಲೇಖನದಲ್ಲಿ ಉಲ್ಲೇಖವಿದೆ. ಈ ಲೇಖನದ ಸಾರಾಂಶದಿಂದಲೇ ಜೈಪುರದಲ್ಲಿ ಸ್ವಾಮೀಜಿಯವರ ದಿನಚರಿಯ ಬಗ್ಗೆ, ಅವರು ಯಾವ ಯಾವ ವಿಷಯಗಳ ಬಗ್ಗೆ ಚರ್ಚಿಸಿದರು ಎನ್ನುವ ಬಗ್ಗೆ, ಅವರು ಹಾಡಿದ ಭಜನೆಗಳ ಬಗ್ಗೆ ಹಾಗೂ ಅವರ ನೇರ ಸಂಪರ್ಕಕ್ಕೆ ಬಂದ ಜೈಪುರದ ಜನರ ಬಗ್ಗೆ ತಿಳಿಯುವ ಅವಕಾಶ ಇಂದು ಎಲ್ಲ ಆಸಕ್ತರಿಗೆ ಲಭಿಸಿದೆ.

ಸಂಸಾರಚಂದ್ರ ಸೇನ್ ಜನಿಸಿದ್ದು ೧೮೪೬ನೆಯ ಇಸವಿಯಲ್ಲಿ, ಬಂಗಾಳದ ೨೪ ಪರಗಣ ಜಿಲ್ಲೆಯಲ್ಲಿಯ ನಾಟಜೋಡ ಎಂಬ ಗ್ರಾಮದಲ್ಲಿ. ಅವನು ನೀಲಾಂಬರ ಸೇನ್‌ರ ಹಿರಿಯ ಮಗನಾಗಿದ್ದ. ಆಗ್ರಾ ಕಾಲೇಜಿನಲ್ಲಿ ಪದವಿಯನ್ನು ಪೂರೈಸಿ ಜಯಪುರದ ಮಹಾರಾಜ ಕಾಲೇಜಿನಲ್ಲಿ ಶಿಕ್ಷಕನಾಗಿ ಕಾರ್ಯ ಕೈಗೆತ್ತಿಕೊಂಡಿದ್ದ. ತರುವಾಯ ಜೈಪುರದ ರಜಪೂತ ಕಾಲೇಜಿನಲ್ಲಿ ಪ್ರಾಂಶುಪಾಲನಾಗಿ ಕಾರ್ಯ ನಿರ್ವಹಿಸಿದ. ಅವನ ಶಿಷ್ಯರಲ್ಲಿ ಒಬ್ಬನಾಗಿದ್ದ ಸಾಹೇಬ ಬಹದ್ದೂರ ಜೈಪುರದ ಅರಸನಾಗಿ ರಾಜ್ಯಭಾರ ಮಾಡುತ್ತಿದ್ದಾಗ ಅವನನ್ನು ರಾಜಸಭೆಯ ಕಾರ್ಯನಿರ್ವಾಹಕನನ್ನಾಗಿ ನಿಯಮಿಸಿದ್ದ. ಕಾಂತಿಚಂದ್ರ ಮುಖರ್ಜಿ ನಿಧನರಾದ ಮೇಲೆ ಸಂಸಾರಚಂದ್ರ ಸೇನ್ ಜೈಪುರದ ಮಂತ್ರಿಯಾಗಿ ನಿಯುಕ್ತನಾಗಿದ್ದ. ಸಂಸಾರಚಂದ್ರನ ಹೆಂಡತಿ ಹೇರಂಬರಾಣಿ. ಆತನ ಮಗ ಅವಿನಾಶಚಂದ್ರ ಸೇನ ಹಾಗೂ ಸೊಸೆ ಸರಳಾದೇವಿ.

ಹೇರಂಬರಾಣಿ ೧೮೫೭ನೆಯ ಇಸವಿಯಲ್ಲಿ ಜನಿಸಿದ್ದಳು. ಅವಳು ತುಂಬ ಸರಳ ಹಾಗೂ ಮೃದುಭಾಷಿಣಿಯಾಗಿದ್ದಳು. ಅವಳು ಉತ್ತಮ ಪಾಂಡಿತ್ಯವನ್ನು ಹೊಂದಿದವಳಾಗಿದ್ದು ಸದಾ ಶಾಂತ ಜೀವನವನ್ನು, ಆಧ್ಯಾತ್ಮಿಕತೆಯ ಬದುಕನ್ನು ಇಷ್ಟಪಡುತ್ತಿದ್ದಳು. ಅವಳ ಪತಿ ರಾಜಪರಿವಾರದೊಂದಿಗೆ ಅಷ್ಟೊಂದು ನಿಕಟವರ್ತಿಯಾಗಿ, ಶ್ರೀಮಂತನಾಗಿದ್ದರೂ ಕೂಡ ಅವಳಲ್ಲಿ ಕಿಂಚಿತ್ತೂ ಅಭಿಮಾನದ ಲವಲೇಶವಿರಲಿಲ್ಲ. ಬಹಳಷ್ಟು ಪುಸ್ತಕಗಳನ್ನು, ಗ್ರಂಥಗಳನ್ನು ಚೆನ್ನಾಗಿ ಓದಿ ಅರ್ಥೈಸಿಕೊಂಡಿದ್ದ ಆಕೆಗೆ ಸಾಹಿತ್ಯವನ್ನು ಹಾಗೂ ಸಣ್ಣ ಸಣ್ಣ ಕವಿತೆಗಳನ್ನು ಬರೆಯುವ ಹವ್ಯಾಸ ಕೂಡ ಇತ್ತು. ತಾನೇ ಬರೆದ ಸಣ್ಣಕವಿತೆಗಳ ಸಂಗ್ರಹದ ಪುಸ್ತಕವನ್ನೂ ಪ್ರಕಟಿಸಿದ್ದಳು.

ಹೇರಂಬರಾಣಿ



ಸ್ವಾಮಿ ವಿವೇಕಾನಂದರು ಸೇನ್ ದಂಪತಿಗಳ ಮನೆಯಲ್ಲಿ ಅತಿಥಿಯಾಗಿ ಉಳಿದುಕೊಂಡಿದ್ದಾಗ ಅವರಿನ್ನೂ ಕೇವಲ ಬಂಗಾಳದ ಒಬ್ಬ ತರುಣ ಸಂನ್ಯಾಸಿ. ಸುಂದರ ವದನದ, ಸುದೃಢ ಕಾಯದ ತರುಣ ಸಂನ್ಯಾಸಿ. ಬರೀ ಪಾಂಡಿತ್ಯವನ್ನು ಹೊಂದಿರದೆ ಮಧುರವಾದ ಕಂಠಸಿರಿಯನ್ನೂ ಹೊಂದಿದ್ದರು. ಸಂಸಾರಚಂದ್ರನ ಮನೆಯ ದೊಡ್ಡ ಕೊಠಡಿಯಲ್ಲಿ ಸ್ವಾಮೀಜಿಯವರ ಗಾಯನದ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಹೆಂಗಸರು ಪರದೆಯ ಹಿಂದೆ

ಕುಳಿತು ಹಾಡುಗಳನ್ನು ಆಲಿಸುತ್ತಿದ್ದರು. ಹೇರಂಬರಾಣಿ ಸ್ವಾಮೀಜಿಯವರನ್ನು ಪರದೆಯ ಹಿಂದೆಯೇ ಕುಳಿತು ದೂರ ದಿಂದ ನೋಡಿದಳು. ''ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಸಂನ್ಯಾಸಿ ಯಾಗಿದ್ದಾನಲ್ಲ ಈ ಹುಡುಗ, ಇವನ ತಾಯಿ ಇವನ ಈ ನಿರ್ಧಾರ ದಿಂದ ಅದೆಷ್ಟು ನೊಂದಿರಬಹುದು? ಪಾಪ, ಮುಂದಿನ ಊಟ ಎಲ್ಲಿ ಆದೀತು ಎಂಬುದು ಕೂಡ ಈತನಿಗೆ ತಿಳಿಯದಲ್ಲ. ಅದೇನು ಸುಮಧುರವಾದ ಹಾಡುಗಾರಿಕೆ!'' ಎಂದು ಮನದಲ್ಲಿ ಯೋಚಿ ಸುತ್ತ ಅವರು ಹಾಡಿದ ಭಜನೆಗಳನ್ನು ತನ್ನ ನೋಟ್‌ಬುಕ್‌ದಲ್ಲಿ ಬರೆದುಕೊಂಡಳು. ಸ್ವಾಮೀಜಿಯವರು ಗಿರೀಶಚಂದ್ರ ವಿರಚಿತ ಬುದ್ಧನ ಬಗೆಗಿನ ಹಾಡನ್ನು ಹಾಡುತ್ತಿದ್ದರು. ಅದರ ಭಾವಾರ್ಥ ಹೀಗಿದೆ - ''ನಾನು ವಿಶ್ರಾಂತಿಗಾಗಿ ನರಳುತ್ತೇವೆ, ಅಯ್ಯೋ ವಿಶ್ರಾಂತಿ ಮಾತ್ರ ಎಂದಿಗೂ ಸಿಗುವುದಿಲ್ಲ, ಎತ್ತ ಕಡೆಗೆ ಹೋಗು ತ್ತೇವೆ ಎಂಬುದೂ ಗೊತ್ತಿಲ್ಲ. ಪದೇ ಪದೇ ನಗುವಿನ ಹಾಗೂ ಅಳುವಿನ ಅಲೆಗಳಲ್ಲಿ ಸುತ್ತುತ್ತೇವೆ. ಬದುಕಿನ ಹಾದಿ ವ್ಯರ್ಥ ವಾಗಿಯೇ ಕ್ರಮಿಸುತ್ತಿರುತ್ತದೆ. ನಾವೇಕೆ ಈ ಬಗೆಯ ಖಾಲಿ ನಾಟಕವನ್ನು ಆಡುತ್ತಿರುತ್ತೇವೆ?''

ಮೊದಲಿನಿಂದಲೂ ಆಧ್ಯಾತ್ಮಿಕತೆಯತ್ತ ಒಲವಿದ್ದ ಹೇರಂಬ ರಾಣಿ ಈ ಹಾಡನ್ನು ಸ್ವಾಮಿ ವಿವೇಕಾನಂದರನ್ನು ಭೇಟಿ ಮಾಡಿದ ನಂತರ ಹೆಚ್ಚು ಹೆಚ್ಚು ಆಧ್ಯಾತ್ಮಿಕ ಸಾಧನೆಗಳಲ್ಲಿ ತನ್ನನ್ನೇ ತಾನು ತೊಡಗಿಸಲಾರಂಭಿಸಿದಳು. ೧೯೧೩ನೆಯ ಇಸವಿಯಲ್ಲಿ ಕಲ್ಕತ್ತೆಯ ಹಟೀಬಾಗಾನ್ ಎಂಬ ಪ್ರದೇಶದಲ್ಲಿ ಶಿವನ ದೇವಾಲಯವನ್ನು ಕಟ್ಟಿಸಿದಳು. ತನ್ನ ಎಲ್ಲ ಬಂಗಾರ, ಮುತ್ತು, ರತ್ನಗಳನ್ನು ಮಾರಿ ಆ ಹಣವನ್ನೆಲ್ಲ ಮಂದಿರ ನಿರ್ಮಾಣಕ್ಕಾಗಿ ವಿನಿಯೋಗಿಸಿದಳು. ಮಂದಿರದ ಉದ್ಘಾಟನಾ ದಿನದಂದು ನೂರಾರು ಬಡ ಜನರಿಗೆ ಆಹಾರ ಹಾಗೂ ಬಟ್ಟೆ ವಿತರಿಸಿದಳು. ಸ್ವಾಮಿ ವಿವೇಕಾನಂದರ ನುಡಿಗಳಿಂದ ಪ್ರಭಾವಿತಳಾಗಿದ್ದ ಹೇರಂಬರಾಣಿ ತನ್ನ ಉಳಿದ ಬದುಕನ್ನು ಬಡಜನರ ಹಾಗೂ ಅಸಹಾಯಕರ ಸೇವೆಗಾಗಿ ಮೀಸ ಲಾಗಿಟ್ಟಳು. ಸ್ವಾಮೀಜಿಯವರ ಸಲಹೆಯಂತೆ ಸದಾ ಭಕ್ತಿಭಾವ ಭರಿತಳಾಗಿ ಆನಂದದಿಂದ ಬದುಕು ಕಳೆಯುತ್ತ ೧೯೩೯ನೆಯ ಇಸವಿಯಲ್ಲಿ ಇಹಲೋಕಯಾತ್ರೆ ಮುಗಿಸಿ ಶ್ರೀರಾಮಕೃಷ್ಣ ಲೋಕಕ್ಕೆ ಪ್ರಯಾಣಿಸಿದಳು.

## ಸರಳಾದೇವಿ

ಸಂಸಾರಚಂದ್ರಸೇನ್ ಹಾಗೂ ಹೇರಂಬರಾಣಿಯವರಿಗೆ ಬಹ ಳಷ್ಟು ಮಕ್ಕಳಿದ್ದರು. ಅವರ ಹಿರಿಯ ಮಗ ಅವಿನಾಶ ಚಂದ್ರ (೧೮೭೦-ಜನನ; ೧೯೨೦-ಮರಣ). ಜೈಪುರದ ರಾಜಮನೆತನ ದಲ್ಲಿ ಹುಟ್ಟಿ ಬೆಳೆದಿದ್ದ ಅವಿನಾಶ ಚಂದ್ರ ಕೂಡ ಕೆಲದಿನಗಳ ಕಾಲ ಜೈಪುರದ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದ. ಸ್ವಾಮಿ ವಿವೇ ಕಾನಂದರು ಅವರ ಮನೆಗೆ ಭೇಟಿ ಇತ್ತಾಗ ಅವನ ವಯಸ್ಸು ೨೧. ಆತನ ಹೆಂಡತಿ ಸರಳಾದೇವಿ ಸುಮಾರು ಹದಿನಾರು ವಯಸ್ಸಿನವ ಳಾಗಿದ್ದಳು. ಈ ದಂಪತಿಗಳ ಪುತ್ರಿಯಾಗಿ ೧೮೯೪ನೆಯ ಇಸವಿ ಯಲ್ಲಿ ಜನಿಸಿದ್ದ ಜ್ಯೋತಿ-ರ್ಮಯಿದೇವಿ ಸ್ವಾಮಿ ವಿವೇಕಾನಂದರ ಜೈಪುರದ ವಾಸ್ತವ್ಯದ ಬಗ್ಗೆ ತನ್ನ ತಂದೆ, ತಾಯಿ, ಅಜ್ಜ, ಅಜ್ಜಿ ಹಾಗೂ ಸೋದರತ್ತೆಯವರಿಂದ ಮಾಹಿತಿ ಸಂಗ್ರಹಿಸಿ 'ಜೈಪುರೇ ಸ್ವಾಮಿ ವಿವೇಕಾನಂದ'' ಎಂಬ ಶೀರ್ಷಿಕೆಯಲ್ಲಿ ಬಂಗಾಳಿ ಭಾಷೆ ಯಲ್ಲಿ ಲೇಖನವನ್ನು ಬರೆದಿದ್ದಾಳೆ. ಅದನ್ನು ೧೯೬೩ನೆಯ ಇಸವಿಯಲ್ಲಿ 'ಉದ್ಬೋಧನ' ಪತ್ರಿಕೆಯಲ್ಲಿ ಪ್ರತಿ ತಿಂಗಳು ಪ್ರಕಟಿಸಲಾಗುತ್ತಿತ್ತು.


ಸರಳಾದೇವಿ

ಅವಿನಾಶಚಂದ್ರ ಸ್ವಾಮೀಜಿಯವರನ್ನು ಭೇಟಿ ಮಾಡಲು ಜೈಪುರದ ಖೇತ್ರಿ ಅರಮನೆಗೆ ಹೋಗುತ್ತಿದ್ದನು. ಸ್ವಾಮೀಜಿ ಸಂಸಾರ ಚಂದ್ರನ ಮನೆಗೆ ಮೊದಲನೆಯ ಬಾರಿ ಭೇಟಿ ನೀಡಿದ್ದಾಗ ಅವರ ಮನೆ 'ಸಂಸಾರ ವಿಲ್ಲಾ'ದ ಕಟ್ಟಡದ ನಿರ್ಮಾಣ ಪೂರ್ತಿ ಯಾಗಿರಲಿಲ್ಲ. ಜ್ಯೋತಿರ್ಮಯಿ ದೇವಿಯ ತಾಯಿ ಸರಳಾ ದೇವಿಯ ಹೇಳಿಕೆಯ ಪ್ರಕಾರ ಸ್ವಾಮೀಜಿ ಅವರ ಮನೆಯ ಉದ್ಯಾನದಲ್ಲಿದ್ದ ಒಂದು ಹುಲ್ಲಿನ ಕುಟೀರದಲ್ಲಿ ವಾಸವಾಗಿದ್ದರು. ಸಂಸಾರಚಂದ್ರನ ಸಂಸಾರದ ಎಲ್ಲ ಸದಸ್ಯರು ಅಜಮೇರರೋಡ ಹಾಗೂ ಮಿರ್ಜಾ ಇಸಮಾಯಿಲ್ ರೋಡುಗಳು ಕೂಡುವಲ್ಲಿ ಅಂದರೆ ಹಳೆಯ ಜೈಪುರದ ಕೋಟೆಯ ಬಳಿಯಿದ್ದ ಬಂಗಲೆ ಯಲ್ಲಿ ವಾಸವಾಗಿದ್ದರು. ಸ್ವಾಮೀಜಿ ಅಲ್ಲಿಯ ಉದ್ಯಾನದಲ್ಲಿದ್ದ ಒಂದು ಕಲ್ಲಿನ ಖುರ್ಚಿಯ ಮೇಲೆ ಕುಳಿತುಕೊಳ್ಳುತ್ತಿದ್ದರು. ಈಗ ಆ ಉದ್ಯಾನದ ಮನೆ ಇಲ್ಲವಾಗಿದ್ದರೂ ಸೇನ ವಂಶಸ್ಥರು ಸ್ವಾಮೀಜಿ ಕುಳಿತುಕೊಳ್ಳುತ್ತಿದ್ದ ಕಲ್ಲಿನ ಖುರ್ಚಿಯನ್ನು ಇಂದಿಗೂ ಕಾಯ್ದಿಟ್ಟು ಕೊಂಡಿದ್ದಾರೆ!

ಸರಳಾದೇವಿ ಕೂಡ ಸ್ವಾಮೀಜಿ ಹಾಡಿದ ಹಾಡುಗಳನ್ನು ಬರೆ ದಿಟ್ಟುಕೊಳ್ಳುವುದೇ ಅಲ್ಲದೇ ಅವನ್ನು ಮೇಲಿಂದ ಮೇಲೆ ಹಾಡಿ ನೆನಪಿನಲ್ಲಿಟ್ಟುಕೊಂಡಿದ್ದರು. ಅವಳ ಮಗಳು ಜ್ಯೋತಿರ್ಮಯಿ ದೇವಿ ಸ್ವಾಮೀಜಿಯವರ ಬಗ್ಗೆ ತಾಯಿ ಸರಳಾದೇವಿಯನ್ನು ಕೇಳಿ ದಾಗ ಇಳಿ ವಯಸ್ಸಿನಲ್ಲಿಯೂ ಸರಳಾದೇವಿ ಅತ್ಯಂತ ಉತ್ಸಾಹ ದಿಂದ ಸ್ವಾಮೀಜಿ ಹಾಡಿದ್ದ ಎಲ್ಲ ಹಾಡುಗಳನ್ನೂ ಹಾಡಿ ತೋರಿಸಿ ದಳು. ಸೇನ ಕುಟುಂಬದ ಎಲ್ಲ ಸ್ತ್ರೀಯರೂ ಸ್ವಾಮಿ ವಿವೇಕಾ ನಂದರ ಆರಾಧಕರಾಗಿದ್ದರು. ಅವಳು ತುಂಬ ಇಷ್ಟಪಡುತ್ತಿದ್ದ ಒಂದು ಹಾಡಿನ ಅರ್ಥ ಹೀಗಿದೆ.

ಬಂದ ಕೃಷ್ಣ, ಬಂದ ನೋಡಿ
ವೇಣುನಾದ ಹೊಮ್ಮಿದೆ
ರಾಧೆಯ ಅಭಿಲಾಷೆಯ ಗಾನ
ರಾಧೇ ಎಂದು ಕರೆದಿದೆ....


ಇದು ಗಿರೀಶ ಚಂದ್ರನ 'ಚೈತನ್ಯಲೀಲಾ' ನಾಟಕದಲ್ಲಿ ಹಾಡುತ್ತಿದ್ದ ಭಜನೆ ಆಗಿತ್ತು .

ಸರಳಾದೇವಿಗೆ ಜಿತೇಂದ್ರ, ಕ್ಷಿತೀಂದ್ರ, ಅಭಯಪದ, ಗಿರಿಜಾನಾಥ ಮತ್ತು ಭವಾನಿ ಎಂಬ ಐದು ಜನ ಗಂಡುಮಕ್ಕಳು ಹಾಗೂ ಅಭಯಮಯಿ, ಜ್ಯೋತಿರ್ಮಯಿ, ನಿಹಾರಮಯಿ, ಶೋಭಮಯಿ ಮತ್ತು ಕಮಲಾಮಯಿ ಎಂಬ ಐದು ಜನ ಹೆಣ್ಣುಮಕ್ಕಳಿದ್ದರು. ಇಷ್ಟು ದೊಡ್ಡ ಸಂಸಾರದ ಜವಾಬ್ದಾರಿ ಅವಳ ಮೇಲಿದ್ದರೂ ಕೂಡ ಅವಳು ಆಂತರಿಕವಾಗಿ ತನ್ನದೇ ಆದ ಒಂದು ತತ್ತ್ವಕ್ಕೆ ಬದ್ಧಳಾಗಿ ಬದುಕುತ್ತಿದ್ದಳು. ಸ್ವಾಮಿ ವಿವೇಕಾನಂದರ ಬೋಧನೆಯಂತೆ ಜೀವನಲ್ಲಿ ಇರುವ ಶಿವನ ಆರಾಧನೆ ಮಾಡುವುದನ್ನೇ ತನ್ನ ಜೀವನದ ಉದ್ದೇಶವನ್ನಾಗಿಸಿಕೊಂಡಿದ್ದಳು. ತಾನು ಬಂಗಾಳದಲ್ಲಿ ಇರದೇ ಇದ್ದರೂ ಎಷ್ಟೋ ಜನ ದೀನ ಹಾಗೂ ಅಸಹಾಯಕ ಬಂಗಾಳಿ ಜನರಿಗೆ ಆಹಾರ, ಬಟ್ಟೆ ಹಾಗೂ ಔಷಧಿಯನ್ನು ವಿತರಿಸುತ್ತಿದ್ದಳು. ಸ್ವಾಮಿ ವಿವೇಕಾನಂದರ ತತ್ತ್ವಗಳನ್ನೇ ತನ್ನ ಬದುಕಿನುದ್ದಕ್ಕೂ ಚಿಂತಿಸುತ್ತ, ಸಾಧ್ಯವಾದಷ್ಟು ತತ್ತ್ವಬದ್ಧಳಾಗಿಯೇ ಜೀವನ ಸಾಗಿಸಿದ ಸರಳಾದೇವಿ ತನ್ನ  ಎಂಬತ್ತೈದನೆಯ ವಯಸ್ಸಿನಲ್ಲಿ ನಿಧನಳಾದಳು.

## ಪ್ರಭಾವತಿ ದೇವಿ (ಜನನ ೧೮೭೬ ; ಮರಣ ೧೯೫೪)

ಪ್ರಭಾವತಿದೇವಿ ಸಂಸಾರಚಂದ್ರ ಸೇನನ ಎರಡನೆಯ ಮಗಳು, ಅಂದರೆ ಅವಳು ಜ್ಯೋತಿರ್ಮಯಿದೇವಿಯ ಸೋದರತ್ತೆಯಾಗಿದ್ದಳು. ಸ್ವಾಮಿ ವಿವೇಕಾನಂದರು ಜೈಪುರಕ್ಕೆ ಭೇಟಿ ಇತ್ತಾಗ ಅವರನ್ನು ಕಾಣುವ ಸುಯೋಗ ಅವಳಿಗೆ ಲಭಿಸಿತ್ತು. ಅವಳು ಅಕಾಲಿಕವಾಗಿ ಜನಿಸಿದ್ದಳು. (ಒಂಬತ್ತು ತಿಂಗಳು ತುಂಬುವ ಮೊದಲೇ ಜನಿಸುವ ಮಕ್ಕಳಿಗೆ pre-mature baby ಅಥವಾ ಅಕಾಲಿಕ ಮಗು ಎಂದು ಕರೆಯುತ್ತಾರೆ). ಅವಳ ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ. ರಾಜಮನೆತನದಲ್ಲಿ ಜನಿಸಿದ್ದ ಅವಳ ಮದುವೆ ಶ್ರೀಮಂತ ಕುಟುಂಬದ ಹುಡುಗನೊಂದಿಗೆ ನೆರವೇರಿತ್ತು . ದುರದೃಷ್ಟವಶಾತ್ ಅವಳ ಪತಿ ಎರಡೇ ವರ್ಷದಲ್ಲಿ ಮರಣ ಹೊಂದಿದ. ಪ್ರಭಾವತಿ ಮತ್ತೆ ತನ್ನ ತಂದೆಯ ಮನೆಗೆ ಬಂದು ವಾಸಿಸತೊಡಗಿದಳು. ಅವಳಿಗೆ ಕಿವಿ ಸರಿಯಾಗಿ ಕೇಳಿಸದೆ ಇದ್ದಾಗ್ಯೂ, ಅವಳ ನೆನಪಿನ ಶಕ್ತಿ ಅಗಾಧವಾಗಿತ್ತು. ಸ್ವಾಮಿ ವಿವೇಕಾನಂದರು ಹಾಡಿದ್ದ ಹಲವಾರು ಹಾಡುಗಳನ್ನು ಅತ್ಯಂತ ಭಾವಪೂರ್ಣವಾಗಿ ಹಾಡುತ್ತ ಇತರರನ್ನೂ ರಂಜಿಸುತ್ತಿದ್ದಳು. ಈ ಹಾಡುಗಳ ಪೈಕಿ ನಾಲ್ಕು ಹಾಡುಗಳನ್ನಷ್ಟೇ ಜ್ಯೋತಿರ್ಮಯಿದೇವಿ ತನ್ನ ಲೇಖನದಲ್ಲಿ ಉಲ್ಲೇಖಿಸಿದ್ದಾಳೆ.

ಪ್ರಭಾವತಿ ರಾಧಾ-ಕೃಷ್ಣನ ಆರಾಧನೆ ಮಾಡುತ್ತಲೇ  ಜೀವನ ಸಾಗಿಸುತ್ತಿದ್ದಳು. ಗೋವಿಂದ ಅಧಿಕಾರಿಯ 'ಕೃಷ್ಣಯಾತ್ರಾ' ಎಂಬ ನಾಟಕದಲ್ಲಿ ಹಾಡಲಾಗುತ್ತಿದ್ದ 'ಶುಕ-ಸಾರೀ' ಎಂಬ ಹಾಡನ್ನು ಅದೆಷ್ಟು ಭಾವಪುರ್ಣವಾಗಿ, ಮಧುರವಾಗಿ ಹಾಡುತ್ತಿದ್ದಳೆಂದರೆ



ಪ್ರಭಾವತಿ ದೇವಿ

ಅಲ್ಲಿ ನೆರೆದಿದ್ದ ಪ್ರೇಕ್ಷಕ ಕೇಳುಗರೆಲ್ಲ ಕೃಷ್ಣ ಭಾವೋನ್ಮಾದದಲ್ಲಿ ಮೈಮರೆತು ಕಂಬನಿ ತುಂಬಿದವರಾಗಿ ಧ್ಯಾನಮಗ್ನರಾಗುತ್ತಿದ್ದರು! ಅದನ್ನು ಸ್ವಾಮಿ ವಿವೇಕಾನಂದರು ಹಾಡಿದ ಮೇಲಂತೂ ಅವಳು ಹಾಡುತ್ತಿದ್ದ ಶೈಲಿ ಇನ್ನಷ್ಟು ಉತ್ತಮಗೊಂಡಿತು.

ಮೃದು ಹೃದಯದ ಪ್ರಭಾವತಿ ತುಂಬ ಸಹನಶೀಲೆ ಹಾಗೂ ಉದಾರಿಯಾಗಿದ್ದಳು. ಸಣ್ಣವಯಸ್ಸಿನಲ್ಲಿಯೇ ಪತಿಯನ್ನು ಕಳೆದುಕೊಂಡು ಬಾಲವಿಧವೆಯಾಗಿದ್ದ ನಿಷ್ಕಲ್ಮಷ ಮನಸ್ಸಿನ ಈ ಬಾಲೆಯನ್ನು ಕಂಡು ಸ್ವಾಮೀಜಿ ಬಹಳ ನೊಂದುಕೊಂಡರು. ಅವಳು ಮಾತ್ರ ಸ್ವಾಮೀಜಿಯ ಆಶೀರ್ವಾದ ಪಡೆದ ಮೇಲೆ ನಿಶ್ಚಿಂತೆಯಿಂದ ಕಾಲ ಕಳೆಯಲಾರಂಭಿಸಿದಳು. ಸ್ವಾಮೀಜಿ ಮುಖಾಂತರ ಶ್ರೀರಾಮಕೃಷ್ಣ ಹಾಗೂ ಶ್ರೀಮಾತೆ ಶಾರದಾದೇವಿಯವರೂ ತನ್ನನ್ನು ಆಶೀರ್ವದಿಸಿದ್ದಾರೆ ಎಂಬು ಬಲವಾಗಿ ನಂಬಿದ್ದ ಅವಳು, ತನ್ನ ಕೊನೆಯ ದಿನಗಳ ಅಂತಿಮ ಕ್ಷಣದವರೆಗೂ ಸ್ವಾಮೀಜಿಯವರಿಂದ ಕೇಳಿದ ಭಜನೆಗಳನ್ನೇ ನೆನಪಿಸಿಕೊಳ್ಳುತ್ತ ಸಮಚಿತ್ತಳಾಗಿ ಬಾಳಿದಳು. ಸ್ವಾಮೀಜಿಯವರು ಹಾಡಿದ್ದ 'ನಿಶ್ಶಬ್ದ ಕತ್ತಲೆಯ ಮಧ್ಯೆ ತಾಯಿ ನಿನ್ನ ನಿರಾಕಾರತ್ವವನ್ನೂ ಪ್ರಚೋದಿಸುತ್ತಾಳೆ' ಎಂಬ ಭಾವಾರ್ಥದ ಹಾಡು ಅವಳಿಗೆ ಅಚ್ಚುಮೆಚ್ಚಿನದಾಗಿತ್ತು.

ತನ್ನ ಜೀವನದ ಅಂತಿಮ ವರ್ಷಗಳನ್ನು ಪ್ರಭಾವತಿದೇವಿ ತನ್ನ ತಂಗಿ ಲಾವಣ್ಯದೇವಿಯೊಂದಿಗೆ ಅವಳ ಮನೆಯಲ್ಲಿ ಕಳೆದಳು. ತನ್ನ ೭೮ನೆಯ ವಯಸ್ಸಿನಲ್ಲಿ ಭವಾನಿಪುರದಲ್ಲಿ ತನ್ನ ತಂಗಿಯ ಮನೆಯಲ್ಲಿಯೇ ಪ್ರಭಾವತಿ ಇಹಲೋಕ ತ್ಯಜಿಸಿದಳು. ❋

*(ಗ್ರಂಥಋಣ : Indian Women in the Company of Swami Vivekananda, by Tarit Kumar Bandyopadhyay, 2023)*